


‘ಮಗ, ಸೊಸೆ ಟೂರ್ ಹೊರಟಿದ್ದಾರೆ. ನನಗೆ ಒಬ್ಬಳಿಗೇ ಇರಲು ಭಯ’ ಎಂದರು ರುಕ್ಮಿಣಿ. ‘ಅವರು ಬರುವವರೆಗೂ ನೀವು ಇಲ್ಲೇ ಇರಿ ಚಿಕ್ಕಮ್ಮ’ ಎಂದ ಪವನ್. ರುಕ್ಮಿಣಿ ಅವನಿಗೆ ತಾಯಿಯ ಕಡೆಯ ಸಂಬಂಧ. ಅವರಿಗೆ ಪವನ್ ಬಗ್ಗೆ ತುಂಬಾ ಪ್ರೀತಿ. ಬೇಜಾರಾದಾಗ ಬಂದು ನಾಲ್ಕು ದಿನ ಇದ್ದು ಹೋಗುತ್ತಿದ್ದರು. ರುಕ್ಮಿಣಿಯ ಸಹಾಯದಿಂದ ಗೆಳತಿಗೆ ಇಷ್ಟವಾದ ಕ್ಯಾರೆಟ್‌ಹಲ್ವ, ಅಣ್ಣನಿಗೆ ಇಷ್ಟವಾದ ಕೋಡುಬಳೆ ಮಾಡಿದಳು. ಎರಡನ್ನೂ ಎರಡು ಮನೆಗಳಿಗೂ ಪ್ಯಾಕ್ ಮಾಡಿದಳು.

ಪ್ರತಿಮಾ ಸರಸ್ವತಿಪುರಂನಲ್ಲಿದ್ದಳು. ಮನೆಯ ಲೊಕೇಶನ್ ಕಳಿಸಿದ್ದಳು. ಮನೆ ಹುಡುಕುವುದು ಕಷ್ಟವಾಗಲಿಲ್ಲ. ಮನೆಯ ಮುಂದೆ ಬಾಲಾಜಿ ಕಾಂಪ್ಲೆಕ್ಸ್ ಇತ್ತು. ಕಾಂಪೌಂಡ್ ಇದ್ದ ಮನೆ, ಮನೆಯ ಮುಂದೆ ಡಾ. ಪ್ರತಿಮಾ, ಡಾ. ಪುರುಷೋತ್ತಮ್ ಎಂಬ ಎರಡು ಬೋರ್ಡ್‌ಗಳಿದ್ದವು. ಪವನ್ ಹೆಂಡತಿಯ ಕಡೆ ನೋಡಿದ. ಅವನ ಮುಖದಲ್ಲಿ ನಗುವಿತ್ತು. ಪ್ರತಿಮಾ ಬಂದು ಸ್ವಾಗತಿಸಿದಳು.

ಇವರು ನನ್ನ ಹಸ್‌ಬೆಂಡ್ ಡಾ. ಪುರುಷೋತ್ತಮ್. ಗಂಗೋತ್ರಿಯ ಇಂಗ್ಲಿಷ್ ಡಿಪಾರ್ಟ್‌ಮೆಂಟ್‌ನಲ್ಲಿದ್ದಾರೆ.

‘ನೈಸ್ ಟು ಮೀಟ್ ಯು. ಪ್ರತಿಮಾ ನಿಮ್ಮಿಬ್ಬರ ಬಗ್ಗೆ ಹೇಳ್ತಾನೇ ಇರ್ತಾಳೆ’, ಅವರು ಪವನ್ ಕೈ ಕುಲುಕುತ್ತಾ ಹೇಳಿದರು. ಪ್ರತಿಮಾ ಕಾಫಿ ತಂದಳು. ಅವನು ಕಾಫಿ ಕುಡಿಯುವಾಗ ಪವನ್ ಹೇಳಿದ, ಬೃಂದಾ, ನಾನು ಮುರಳೀನ್ನ ಮೀಟ್ ಮಾಡಿ ಬರ್ತೀನಿ.

‘ಊಟಕ್ಕೆ ಇಲ್ಲಿಗೆ ಬರಬೇಕು’ ಎಂದಳು ಪ್ರತಿಮಾ.

‘ಖಂಡಿತಾ ಬರ್ತೀನಿ. ವಿಜಯನಗರದಲ್ಲಿ ನನ್ನ ಫ್ರೆಂಡ್ ಸೈಟ್ ತೋರಿಸ್ತಾನೆ. ನೋಡಿಕೊಂಡು ಬರ್ತೀನಿ’.

‘ನಾನು ಜೊತೆಯಲ್ಲಿ ಬರಬಹುದಾ?’ ಪುರುಷೋತ್ತಮ್ ಕೇಳಿದರು.

‘ಶೂರ್’ ಎಂದ ಪವನ್. ಇಬ್ಬರೂ ಹೊರಟರು.

‘ನೀನೇ ಅಡುಗೆ ಮಾಡ್ತೀಯಾ?’

‘ಇಲ್ಲ ಅಡುಗೆಯವರಿದ್ದಾರೆ. ಹತ್ತಿರದಲ್ಲೇ ಮನೆ. ಅಡುಗೆ ಮಾಡಿಟ್ಟಿದ್ದಾರೆ. ಪಕೋಡ ಮಾಡಬೇಕಷ್ಟೆ’. ಹಾಲ್‌ನಲ್ಲಿ ಇಬ್ಬರೂ ಹರಟುತ್ತಾ ಕುಳಿತರು.

‘ನಿನಗೆ ನನ್ನ ಮೇಲೆ ಕೋಪ ಬಂದಿರಬೇಕಲ್ವಾ?’

‘ಕೋಪ ಅಲ್ಲ. ನನಗೆ ತುಂಬಾ ಬೇಜಾರಾಗಿತ್ತು’

‘ಈ ದಿನ ನಾನು ಇಷ್ಟು ಸುಖವಾಗಿರಲು ನಿನ್ನ ಗಂಡ ಕಾರಣ ಬೃಂದಾ’.

‘ಪವನ್ ಕಾರಣಾನಾ?’

‘ಹೌದು. ನೀನು ನನ್ನನ್ನು ಗಣೇಶನ ಹಬ್ಬಕ್ಕೆ ಕರೆದಿದ್ದೆ. ಆ ದಿನವೇ ನಮ್ಮಣ್ಣ ಬರುವವನಿದ್ದ. ಆದ್ದರಿಂದ ನಿಮ್ಮನೆಗೆ ಹಬ್ಬದ ದಿನ ಬರಕ್ಕಾಗಲ್ಲ ಎಂದು ಹೇಳಕ್ಕೆ ಬಂದೆ. ಆ ದಿನ ನಿಮ್ಮ ಕಾಲೇಜ್ ಡೇ ಇತ್ತು. ನೀನು ಬರೋದು ತಡವಾಗತ್ತೇಂತ ತಿಳಿಯಿತು. ಮಕ್ಕಳೂ ಮನೆಯಲ್ಲಿರಲಿಲ್ಲ. ಪವನ್ ನನಗೆ ಕಾಫಿ ಮಾಡಿಕೊಟ್ಟರು’.

‘ಹೌದಾ?’

‘ಅವರೇ ನನಗೆ ನೀವು ಪಿ.ಎಚ್.ಡಿ ಮಾಡಿ. ಕೇವಲ ಡಿಗ್ರಿ, ಸಂಬಳಕ್ಕಾಗಿ ಅಲ್ಲ. ನಿಮಗೆ ಹೊಸಬರ ಪರಿಚಯವಾಗತ್ತೆ. ಆ ಪರಿಚಯ ನಿಮ್ಮ ಬದುಕಲ್ಲಿ ಬದಲಾವಣೆ ತರಬಹುದು’ ಎಂದರು.

‘ನನಗೆ ಯಾವ ಬದಲಾವಣೆಯೂ ಬೇಕಾಗಿಲ್ಲ ಅಂತ ನಾನು ಹೇಳಿದೆ’.

‘ಯಾಕೆ ಹಾಗೆ ಹೇಳ್ತೀರ? ಈಗ ನಿಮಗೆ ಯಾರೂ ಬೇಡ ಏನೂ ಬೇಡ ಅನ್ನಿಸಬಹುದು. ಒಳ್ಳೆಯ ಸ್ನೇಹಿತರು ಇರಬಹುದು. ಒಂದು ಹಂತ ದಾಟಿದ ಮೇಲೆ ಪ್ರತಿಯೊಬ್ಬರಿಗೂ ತಮ್ಮ ಗಂಡ, ಮಕ್ಕಳು ಮುಖ್ಯವಾಗಿಬಿಡ್ತಾರೆ. ನೀವು ಪುನಃ ಒಂಟಿಯಾಗ್ತೀರ. ನೀವು ಪಿ.ಎಚ್.ಡಿ ಮಾಡಿ, ಖಂಡಿತಾ ನಿಮಗೆ ಒಳ್ಳೆಯದಾಗತ್ತೆ; ಜೀವನ ನಿಂತ ನೀರಾಗಬಾರದು’ ಎಂದರು.

‘ನಂಬಕ್ಕಾಗ್ತಿಲ್ಲ. ಪವನ್ ಅಷ್ಟೆಲ್ಲಾ ಯೋಚನೆ ಮಾಡಿದ್ರಾ?’

‘ಮೊದಲು ನನಗೂ ಆಶ್ಚರ್ಯವಾಯಿತು. ಅವರ ಮಾತುಗಳ ಬಗ್ಗೆ ಯೋಚಿಸಿದಾಗ ಯಾಕೆ ಓದು ಮುಂದುವರೆಸಬಾರದೂಂತ ಅನ್ನಿಸಿತು. ನನಗೆ ಬೆಂಗಳೂರಲ್ಲಿ ಪಿ.ಎಚ್.ಡಿ. ಮಾಡಲು ಇಷ್ಟವಿರಲಿಲ್ಲ. ಮೈಸೂರಿನಲ್ಲಿ ಮಾಡಬೇಕು ಎಂದುಕೊಂಡೆ. ನಮ್ಮ ಕಾಲೇಜ್ ಹೊಸ ಬ್ರಾಂಚ್‌ಗೆ ವರ್ಗ ಮಾಡಿಸಿಕೊಂಡೆ. ನನ್ನ ಕಸಿನ್ ತಾರಾಳ ಮನೆಯಲ್ಲಿದ್ದೆ. ಅವಳು ಎಂ.ಎಸ್.ಸಿ ಮಾಡಿದ್ದರೂ ಕೆಲಸವಿರಲಿಲ್ಲ. ಅವಳು, ಅವಳ ತಾಯಿ ಇಬ್ಬರೇ ಇದ್ರು. ನಂತರ ಗಂಗೋತ್ರಿಯ ನಮ್ಮ ಡಿಪಾರ್ಟ್‌ಮೆಂಟ್‌ನ ಸುಲೋಚನ ಮ್ಯಾಮ್‌ನ ಮೀಟ್ ಮಾಡಿದೆ. ಅವರು ಪುರುಷೋತ್ತಮ್‌ನ ಪರಿಚಯ ಮಾಡಿಸಿದ್ರು’.

‘ನಿನ್ನ ಗಂಡ ಸ್ಮಾರ್ಟ್ ಆಗಿದ್ದಾರೆ. ಅವರು ಯಾಕೆ ಮದುವೆಯಾಗಿರಲಿಲ್ಲ?’

‘ಅವರಿಗೆ ಮದುವೆಯಾಗಿತ್ತು. ನಾನು ಪರಿಚಯವಾಗುವ ಎರಡು ವರ್ಷಗಳ ಹಿಂದೆ ಅವರು, ಹೆಂಡತಿ, ಮಗು ಜೊತೆ ತಿರುಪತಿಗೆ ಹೋಗಿ ಬರುವಾಗ ಕಾರು ಆಕ್ಸಿಡೆಂಟ್‌ನಲ್ಲಿ ಹೆಂಡತಿ, ಮಗೂನ್ನ ಕಳೆದುಕೊಂಡಿದ್ರು’.

‘ಅವರು ಮೊದಲು ಒಪ್ಪಲಿಲ್ಲ. ನಾನು ತುಂಬಾ ರಿಕ್ವೆಸ್ಟ್ ಮಾಡಿಕೊಂಡ ಮೇಲೆ ಒಪ್ಪಿದರು. ಕ್ರಮೇಣ ನಾವು ಹತ್ತಿರವಾದೆವು. ಅವರೇ ಪ್ರಪೋಸ್ ಮಾಡಿದರು.’

‘ತುಂಬಾ ಖುಷಿಯಾಯ್ತು ಪ್ರತಿಮಾ’.

‘ನನಗೀಗ 35 ವರ್ಷ. ಎಂ.ಎ. ಮುಗಿದಾಗ 23 ವರ್ಷ. ಶಂಕರೇಗೌಡ ಮದುವೆಯಾಗ್ತಾನೇಂತ 2 ವರ್ಷ ಕಾದೆ. ನಿನ್ನ ಬಲವಂತಕ್ಕೆ ಬೆಂಗಳೂರಿಗೆ ಬಂದು ಆದರ್ಶ ಕಾಲೇಜ್‌ನಲ್ಲಿ 8 ವರ್ಷ ಕೆಲಸ ಮಾಡಿದೆ. ನನಗೆ ಮಕ್ಕಳು ಬೇಡ ಅನ್ನಿಸ್ತು. ಪುರುಷೋತ್ತಮ್ ಕೂಡ ಒಪ್ಪಿದ್ದಾರೆ. ಇತ್ತೀಚೆಗೆ ಒಂದು ಹೆಣ್ಣು ಮಗೂನ್ನ ದತ್ತು ತೆಗೆದುಕೊಳ್ಳಬೇಕು ಅನ್ನಿಸ್ತಿದೆ’.

‘ಒಳ್ಳೆಯ ನಿರ್ಧಾರ’.

‘ನಾನು ಈ ದಿನ ಇಷ್ಟು ಖುಷಿಯಾಗಿರಲು ಪವನ್ ಕಾರಣ. ಅವರ ಬುದ್ಧಿವಾದ ಕೇಳಿದ್ದರಿಂದ ನನ್ನ ಜೀವನಾನೇ ಬದಲಾಗಿ ಹೋಯ್ತು’.

ಅಷ್ಟರಲ್ಲಿ ಅಡುಗೆಯವರು ಬಂದರು. ಅವರು ಬಾಂಡ್ಲೆ ಕಾಯಲಿಟ್ಟು ಎಣ್ಣೆ ಹಾಕಿದರು. ಅದೇ ವೇಳೆಗೆ ಪವನ್, ಪುರುಷೋತ್ತಮ್ ಹಿಂದಿರುಗಿದರು.

‘ಸೈಟ್ ಒಪ್ಪಿಗೆಯಾಯ್ತಾ?’

‘ಸೈಟಲ್ಲ. ಮನೆ ನೋಡಿಕೊಂಡು ಬಂದೆವು’.

‘ಮನೇನಾ?’

‘ಮುರಳಿ ತೋರಿಸಿದ ಸೈಟ್ ಇಷ್ಟವಾಗಲಿಲ್ಲ. ಪುರುಷೋತ್ತಮ್ ಒಂದು ಮನೆ ತೋರಿಸಿದರು. ವಿಜಯನಗರದ ಕೃಷ್ಣದೇವರಾಯ ಸರ್ಕಲ್ ಹತ್ತಿರ ಇದೆ. ಮೂರು ಬೆಡ್‌ರೂಂ ಮನೆ. ನಮ್ಮ ಬೆಂಗಳೂರು ಮನೆಯಷ್ಟೇ ವಿಶಾಲವಾಗಿದೆ. ನೀನೂ ಒಂದು ಸಲ ನೋಡು. ಆಮೇಲೆ ಡಿಸೈಡ್ ಮಾಡೋಣ’.

‘ರಿಟೈರ್ ಆದ ಮೇಲೆ ಮೈಸೂರಲ್ಲಿ ಸೆಟ್ಲ್ ಆಗ್ತೀರಾ?’ ಪ್ರತಿಮಾ ಕೇಳಿದಳು.

‘ಹೌದು ಕಣೆ. ನಿವೃತ್ತ ಜೀವನಕ್ಕೆ ನಮ್ಮ ಮೈಸೂರು ಚೆನ್ನ ಅಲ್ವಾ?’


‘ಹೌದು ಕಣೆ. ಖಂಡಿತಾ ಮೈಸೂರಿಗೆ ಬಾ’ ಎಂದಳು ಪ್ರತಿಮಾ.

ಬೃಂದಾ ಗಂಡನ ಬಳಿ ಪಿಸುಗುಟ್ಟಿದಳು. ‘ನಿಮಗೆ ಥ್ಯಾಂಕ್ಸ್. ಪ್ರತಿಮಾ ಹೀಗೆ ಖುಷಿಯಾಗಿರುವುದಕ್ಕೆ ನೀವೇ ಕಾರಣ’.

ಪವನ್ ನಸುನಕ್ಕ.

ಪ್ರತಿಕ್ರಿಯಿಸಿ: feedback@sudha.co.in

## ಸಮಯ



ಪ್ರಪಂಚದಲ್ಲಿ ಇಂದಿಗೂ
ಹೆಚ್ಚು ಕಡಿಮೆ ಆಗದಿರುವುದು
ಅಮೂಲ್ಯವಾದ ಸಮಯ
ಹಣದ ವ್ಯಯವಾದರೂ
ಮಾಡಲೇಬಾರದು
ಸಮಯದ ಅಪವ್ಯಯ

***

## ಸಮಾನತೆ

ಮಹಿಳೆಗೂ ಬೇಕು ಸಮಾನತೆ
ಅದಕ್ಕೆಂದೇ ಮಡದಿ ಅಂದಳು
ಮನೆಯ ಕೆಲಸದಲ್ಲೂ ಇರಲಿ
ಫಿಫ್ಟಿ ಫಿಫ್ಟಿ...
ಜಾರಿ ಆಗಲೇಬೇಕು ನಿಯಮ
ಇಲ್ಲದಿದ್ದರೆ ಪತಿಗೆ ಇಲ್ಲ
ಪ್ರತಿದಿನ ಕಾಫಿ ಟೀ!

■ **ವೆಂಕಟೇಶ ಚಾಗಿ, ಕೊಪ್ಪಳ**